HON. MEMBERS.—Yes.

Mr. SPEAKER.—Permission to remain absent is granted.

I now call upon Hon. Member Sri T. R. Shamanna to continue his speech.

Point of Order *re* : discrimination between members by the Chair

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ ಕ್ಷಮಿಸಬೇಕು. ಪ್ರಶ್ನೋತ್ತರದ ವೇಳೆಯಲ್ಲ ನಾನು ಒಂದು ಕ್ರಿಯಾಲೋಪ ಎತ್ತಿದ್ದೆ ಆಗ ಮಾನ್ಯಸದಸ್ಯರು ಪ್ರಶ್ನೋತ್ತರ ವೇಳೆಯಲ್ಲ ಕ್ರಿಯಾಲೋಪ ಎತ್ತುವುದ ಕ್ಕಾಗುವುದಿಲ್ಲ ಎಂದು ಆಕ್ಷೇಪಣೆ ತೆಗೆದರು, ಆದ್ದರಿಂದ ನಾನು ಅಲ್ಲಗೇ ನಿಲ್ಲಿಸಿದೆ. ಈಗ ಆ ಕ್ರಿಯಾಲೋಪವನ್ನು ಎತ್ತುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರ್‌ರವರು ತಮ್ಮನ್ನು ಉದ್ದೇಶಿಸಿ ಕೆಲವು ಮಾತುಗಳನ್ನು ಆಡಿದರು. "I am being discriminated by the Chair" ಎಂದು ಹೇಳಿದರು. ನೀವು ಅನೇಕ ಸಾರಿ ಪದೇ ಪದೇ ಆ ವಿಚಾರದಲ್ಲ ಅವರು ಹೇಳಿದ್ದು ಸರಿಯಲ್ಲ ಎಂದು ಹೇಳಿದರೂ ಕೂಡ ಅದೇ ವಿಚಾರವನ್ನು ಅವರು ಪದೇ ಪದೇ ಪ್ರಸ್ತಾಪ ಮಾಡಿದರು. ತಾವು ಒಂದು ರೂಲಿಂಗ್ ಕೂಡ ಕೊಟ್ಟರಿ—ಆ ಪದಗಳನ್ನು — ಆ ವಾಕ್ಯವನ್ನು ಹಿಂದೆಗೆದುಕೊಳ್ಳಬೇಕು ಎಂದು ಹೇಳಿದಿರಿ, ಅದನ್ನು ಅವರು ಆಗ ಮಾನ್ಯ ಮಾಡಲಲ್ಲ, ಮಾನ್ಯ ಮಾಡಿದ್ದರೆ ಚೆನ್ನಾಗಿತ್ತು. ನಾನಾದರೂ ಈಗ ಎತುತ್ತಾ ಇರತಕ್ಕ ಕ್ರಿಯಾಲೋಪ ಅವರು ಹೇಳಿದಂತಹ ವಾಕ್ಯ ಏನಿದೆ ಅದು ಸರಿಯಾದ್ದಲ್ಲ ಅದು ಅಧ್ಯಕ್ಷರ ಮೇಲೆ ಆರೊಪಣೆ ಬರುವಂತಹ ಮಾತು, ಆ ಮಾತನ್ನು ಅವರು ವಾಪಸು ಪಡೆದುಕೊಳ್ಳಬೇಕು. ಆ ಮಾತನ್ನು ಅವರು ಉಪಯೋಗಿಸಿದ್ದಕ್ಕಾಗಿ ಈ ಸಭೆಗೆ ಕ್ಷಮಾಪಣೆಯನ್ನು ಕೇಳಬೇಕು.

Mr. SPEAKER.—Let the hon. Member Sri B. P. Gangadhar state clearly.

Sri B. P. GANGADHAR.—Sir, I did not follow what the Minister said.

ಅಧ್ಯಕ್ಷರು.—"ನೀವು ಡಿಸ್ಕ್ರಿಮಿನೇಷನ್ ಮಾಡುತ್ತಾ ಇದ್ದೀರಿ" ಎಂದು ಹೇಳಿದಿರಿ, ಸ್ಪೀಕರ್ ಎಂದೆಂದೂ ಡಿಸ್ಕ್ರಿಮಿನೇಟ್ ಮಾಡಿಲ್ಲ. ಒಂದೇ ವ್ಯಾಖ್ಯಕ್ಕೆ 3-4 ಜನರು ಎದ್ದು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗ ಹಾಗೆ ಹೇಳಬೇಕಾಗಿ ಬರುತ್ತದೆ. ಅದು ಡಿಸ್ಕ್ರಿಮಿನೇಷನ್ ಮಾಡಿದಂತೆ ಅಲ್ಲ, ಮಾನ್ಯಸದಸ್ಯರು ಹೇಳಿದ್ದನ್ನು ವಾಪಸು ತೆಗೆದುಕೊಳ್ಳಬೇಕೆಂದು ನಾನು ಹೇಳಿದೆ. ಆ ರೀತಿ ಆಪಾದನೆ ಮಾಡಿದರೆ ಬರೀ ಚೇರ್‌ಗೆ ಮಾತ್ರವಲ್ಲ, ಇಡೀ ಸಭೆಗೆ ಅನ್ಯಯವಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ್ದನ್ನು ವಾಪಸು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತಾ ಇದ್ದೇನೆ.

ಶ್ರೀ ಬಿ. ಪಿ. ಗಂಗಾಧರ್.—ಪ್ರೊಸೀಡಿಂಗ್ಸ್ ಕಾಪಿಯನ್ನು ಕೊಡಿಸಬೇಕು ಸ್ವಾಮಿ. Before I say anything, I want to go through the proceedings as to how it is recorded, because I feel that I have not expressed in that language ; that is not the language that is used by me. Let a copy of the proceedings be made available to me.

Mr. SPEAKER.—The office will give a copy of that portion of the proceedings to the hon. Member.

Lease of Land for the Congress Exhibition at the Subhash Nagar Tank, Bangalore

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಮುಖ್ಯಮಂತ್ರಿಗಳು ವಿರೋಧಪಕ್ಷಗಳ ನಾಯಕರುಗಳನ್ನು ಕರೆಸಿ ಇದರ ಬಗ್ಗೆ ಸಮಾಲೋಚನೆ ನಡೆಸಿ ಒಂದು ಅಂತ್ಯ ತೀರ್ಮಾನ ತೆಗೆದು ಕೊಳ್ಳುತ್ತೇವೆಂದು ಹೇಳಿದರು. ಆದರ ಬಗ್ಗೆ ನನಗೆ ಒಂದು ಸಂದೇಹ ಬಂದಿದೆ. ಅದನ್ನು ತಮ್ಮ ಮುಂದೆ ಇಡುತ್ತೇನೆ.